(ಆ) ವಿಷಯ: ಅಂಗನವಾಡಿ ಸಹಾಯಕಿರನ್ನು ಮತ್ತು ಕಾರ್ಯಕರ್ತೆಯರನ್ನು ನೇಮಕ ಮಾಡುವ ಪ್ರಕ್ರಿಯೆಯಲ್ಲಿ ಗೊಂದಲ ಸ್ಪಷ್ಟಯಾಗಿರುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್: ನಾನು ಮಾನ್ಯ ಶ್ರೀ ರಾಮರೆಡ್ಡಿಯವರು, ಮಾಧುಸ್ವಾಮಿಯವರು ಸಹಿ ಮಾಡಿರತಕ್ಕಂಥ ಹೊಸ ಅಂಗನವಾಡಿ ಕೇಂದ್ರಗಳಿಗೆ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಹುದ್ದೆಗಳ ಆಯ್ಕೆ ವಿಷಯದಲ್ಲಿ ಉಂಟಾಗಿರುವ ಗೊಂದಲದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಮೂರು ಗಂಟೆಗೆ ಸರ್ಕಾರ ಉತ್ತರವನ್ನು ಒದಗಿಸುತ್ತದೆ.

ಅಧ್ಯಕ್ಷರು: ಸರ್ಕಾರಕ್ಕೆ ಹೇಳುವುದು ಏನೆಂದರೆ, ನಿನ್ನೆಯ ದಿವಸ ನಮ್ಮ ಕಾರ್ಯಾಲಯದಿಂದ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದೇವೆ. ಮಾರನೇ ದಿವಸ ಅದಕ್ಕೆ ಉತ್ತರ ಕಳುಹಿಸುತಕ್ಕಂಥದ್ದು ಸರ್ಕಾರ ಕರ್ತವ್ಯ.

ಶ್ರೀ ಎಂ.ಪಿ. ಪ್ರಕಾಶ್: ಮಧ್ಯಾಹ್ನ ಮೂರು ಗಂಟೆಗೆ ಸರ್ಕಾರ ಉತ್ತರವನ್ನು ಕೊಡುತ್ತದೆ.

ಅಧ್ಯಕ್ಷರು: ಈಗ ಏನಾಗಿದೆ ಮಾನ್ಯ ಈಶ್ವರಪ್ಪನವರು ಯಾವುದೋ ಕಾರಣಕ್ಕಾಗಿ ಈಗ ಉತ್ತರ ಕೊಡುವುದಕ್ಕಾಗುವುದಿಲ್ಲವೆಂದು ಪತ್ರ ಕಳುಹಿಸಿದ್ದಾರೆ... ನಾವು ಅಜೆಂಡಾದಲ್ಲಿ ಹಾಕಲೇಬೇಕಾಗುತ್ತದೆ

(ಗೊಂದಲ)

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಯಾವುದಕ್ಕೂ ಉತ್ತರವಿಲ್ಲ. ಸರ್ಕಾರಕ್ಕೆ ಛೀಮಾರಿ ಹಾಕಿ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ: ಅಜೆಂಡಾವನ್ನು ಓದಿದ್ದಾರೋ ಇಲ್ಲವೋ ಎಂದು ಈ ಸದನದ ಮುಂದೆ ಹೇಳಿಸಿಬಿಡಿ. ಇವತ್ತು ಈ ಶಾಸನಸಭೆಯಲ್ಲಿ ಏನು ಅಜೆಂಡಾ ಇದೆ ಎನ್ನುವುದಾದರೂ ಗೊತ್ತೇ? ಕೇಳಿ ಸಾರ್? ಏಕೆ ಎಲ್ಲರಿಗೂ ಅಜೆಂಡಾವನ್ನು ರೂಂಗೆ ಹಾಕುತ್ತೀರಿ? ಏಕೆ ಎಲ್ಲಾ ಮಂತ್ರಿಗಳ ಮನೆಗೆ ಅಜೆಂಡಾವನ್ನು ಕಳುಹಿಸುತ್ತೀರಿ? ಅವರಿಗೆ ಅಜೆಂಡಾದಲ್ಲಿ ಏನು ಇದೆ ಎಂದು ಗೊತ್ತಿಲ್ಲದಿದ್ದರೆ ಹೇಗೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಮುಖ್ಯಮಂತ್ರಿಗಳು ಸದನವನ್ನು ನಿರ್ಲಕ್ಷ್ಯ ಮಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಮುಖ್ಯಮಂತ್ರಿಗಳನ್ನು ಸಭೆಗೆ ಕರೆಸಿ ಸ್ವಾಮಿ. ಇಲ್ಲಾಂದ್ರೆ ನಾವು ಧರಣಿ ಹೂಡುತ್ತೇವೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸದನದ ಬಾವಿಗೆ ಬಂದರು)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಮುಖ್ಯಮಂತ್ರಿಗಳು ಸದನವನ್ನು ನಿರ್ಲಕ್ಷ್ಯ ಮಾಡುತ್ತಿದ್ದಾರೆ.

ಅಧ್ಯಕ್ಷರು: ಆಯಿತು ಅದನ್ನು ಮಧ್ಯಾಹ್ನ ತೆಗೆದುಕೊಳ್ಳೋಣ ತಮ್ಮ ಆಸನಕ್ಕೆ ನಡೆಯಿರಿ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ: ಐದು ಗಮನ ಸೆಳೆಯುವ ಸೂಚನೆಗಳಿಗೆ ಉತ್ತರ ಇಲ್ಲ ಎಂದರೆ ಹೇಗೆ?

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಉತ್ತರ ಕೊಡಬೇಕಾದಂಥ ಸರ್ಕಾರ ಈ ರೀತಿ ನುಣುಚಿಕೊಳ್ಳತಕ್ಕಂಥದ್ದು ಸರಿಯೇ? (ಗೊಂದಲ) ಅಧ್ಯಕ್ಷರೆ, ಇದನ್ನು ಹೇಗೆ ಸಮರ್ಥನೆ ಮಾಡುತ್ತೀರಿ?

ಅಧ್ಯಕ್ಷರು: ಈ ವಿಷಯವನ್ನು ಭೋಜನದ ವಿರಾಮದ ನಂತರ ತೆಗೆದುಕೊಳ್ಳೋಣ. ಈಗ ಸದನವನ್ನು ಮೂರು ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು 1–19ಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3.00ಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 3.42 ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಸಭಾಧ್ಯಕ್ಷರಾದ (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

ಅಧ್ಯಕ್ಷರು: ಈಗಾಗಲೇ ಮಾನ್ಯ ಸದಸ್ಯರಾದ ಆರಗ ಜ್ಞಾನೇಂದ್ರರವರು ಮಾನ್ಯ ಮಂತ್ರಿಗಳ ಗಮನವನ್ನು ಸೆಳೆದಿದ್ದಾರೆ. ಮಾನ್ಯ ಮಂತ್ರಿಗಳು ಉತ್ತರವನ್ನು ನೀಡಬೇಕು.